## *ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬನಹಟ್ಟಿ*

ಉಪಸ್ಥಿತರು : ಎಚ್. ಶ್ವೇತಾ,
ಬಿ.ಎ.,ಎಲ್.ಎಲ್.ಎಂ.
ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳು, ಬನಹಟ್ಟಿ

ಸಿ.ಸಿ. ನಂ. 616/2014

ಫಿರ್ಯಾದಿ : ಸರಕಾರದ ಪರವಾಗಿ ತೇರದಾಳ ಪೋಲಿಸ ಠಾಣೆ

**ವಿರುದ್ಧ**

ಆರೋಪಿತರು: ವಿಶ್ವನಾಥ ಪ್ರಹ್ಲಾದ ಸೋನಾರ ಹಾಗೂ ಇತರರು

**-:ದೋಷಾರೋಪಣೆ :-**

*ಎಚ್.ಶ್ವೇತಾ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳು, ಬನಹಟ್ಟಿ ಆದ ನಾನು, ಅರೋಪಿಗಳಾದ :*

ಆರೋಪಿಗಳು :1) ವಿಶ್ವನಾಥ ಪ್ರಹ್ಲಾದ ಸೋನಾರ
2) ಪ್ರಹ್ಲಾದ ಹಣಮಂತ ಸೋನಾರ
3) ಸಂಜು ಮಹಾಲಿಂಗಪ್ಪ ಜೋತಾವರ
4) ಸವಿತಾ ಗಂ. ಪ್ರಹ್ಲಾದ ಸೋನಾರ
5) ಕಾಳವ್ವಾ ಗಂ. ಈರಪ್ಪ ಸೋನಾರ
6) ಹಣಮಂತ ಈರಪ್ಪ ಸೋನಾರ
7) ಶ್ರೀದೇವಿ ಗಂ. ನಾರಾಯಣ ಸೋನಾರ
8) ರಾಘವೇಂದ್ರ ನಾರಾಯಣ ಸೋನಾರ
ಎಲ್ಲರೂ ಸಾಃ ರಬಕವಿ ತಾಃ ಜಮಖಂಡಿ

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ತೇರದಾಳ ಪೋಲಿಸ ಠಾಣೆಯ ಹದ್ದಿಯ ಪೈಕಿ ರಬಕವಿ ಪಟ್ಟಣದ ಮಾಕೇಟನಲ್ಲಿರುವ ಸಿಟಿಎಸ್ ನಂ 1466 ನೇ ಅಂಗಡಿಯಲ್ಲಿ ಪಿರ್ಯಾದಿಯು ಸನ್ 1962 ನೇ ಸಾಲಿನಿಂದ ಬಾಡಿಗೆ ನಾತೆಯಿಂದ ನಡೆಸುತ್ತಿದ್ದು ಸದರ ಅಂಗಡಿಯ ಮಾಲೀಕರಾದ ಮೋಹನ ಗುರುಲಿಂಗಪ್ಪ ಉಮದಿ ಇವರು ಸದರ ಅಂಗಡಿ ಬಿಡಿಸಬೇಕೆಂದು ಕೋರ್ಟಿನಲ್ಲಿ ನ್ಯಾಯ ನಡೆಸಿದ್ದಲ್ಲದೇ ಅಂಗಡಿಯನ್ನು 1 ನೇ ಆರೋಪಿಯಾದ ನಿಮಗೆ 2013 ನೇ ಸಾಲಿನಲ್ಲಿ ಮಾರಾಟ ಮಾಡಿದ್ದರಿಂದ ಸದರಿ ಅಂಗಡಿಯನ್ನು ಬಿಡಿಸಲು 1 ನೇ ಆರೋಪಿಯಾದ ನೀನು ಪಿರ್ಯಾದಿಗೆ ಕೆವಿಯಟ್ ನೋಟೀಸು ನೀಡಿದ್ದು ಅದಕ್ಕೆ ಪಿರ್ಯಾದಿಯು ಬನಹಟ್ಟಿ ನ್ಯಾಯಾಲಯದಲ್ಲಿ ಅಸಲು ದಾವಾ ನಂ-200/2013 ರ ಅಡಿಯಲ್ಲಿ ಕಾಯ್ದೇಶೀರ ಬಿಡಿಸಬೇಕೆಂದು ಮನವಿ ಸಲ್ಲಿಸಿದ್ದು ಇದ್ದು ಅದೇ ಸಿಟ್ಟಿನಿಂದ ಆರೋಪಿತರಾದ ನೀವೆಲ್ಲರೂ ದಿಃ 08.12.2013 ರಂದು 6.00 ಗಂಟೆಗೆ ಸಂಗನಮತರಾಗಿ ಗೈರ ಕಾಯ್ದೆಶೀರ

v. Psoner

30/8/19

ಮಂಡಳಿಯಾಗಿ ಅಕ್ರಮ ಕೂಟ ಸದಸ್ಯರಾಗಿದ್ದು ಆ ಮೂಲಕ ನೀವು ಭಾ.ದಂ.ಸಂ. ಕಲಂ 143 ಸಹ ಕಲಂ 149 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಎರಡನೆಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ ಆರೋಪಿಗಳಾದ ನೀವೆಲ್ಲರೂ ಅಕ್ರಮ ಕೂಟ ಸದಸ್ಯರಾಗಿ ಅಕ್ರಮಕೂಟ ಕಟ್ಟಿಕೊಂಡು ದೊಂಬಿ ಮಾಡಿದ್ದು ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ. ಕಲಂ 147 ಸಹಕಲಂ 149 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಮೂರನೆಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ ಆರೋಪಿಗಳಾದ ನೀವೆಲ್ಲರೂ ಸಿಟಿಎಸ್ ನಂ 1466 ನೇ ಅಂಗಡಿಗೆ ಹಾಕಿದ ಕೀಲಿ ಮುರಿದು ಅತೀಕ್ರಮ ಪ್ರವೇಶ ಮಾಡಿದ್ದು ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ. ಕಲಂ 458 ಸಹಕಲಂ 149 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ನಾಲ್ಕನೆಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ ಆರೋಪಿಗಳಾದ ನೀವೆಲ್ಲರೂ ಅಂಗಡಿಯಲ್ಲಿದ್ದ ಕಿರಾಣಿ ಸಾಮಾನುಗಳನ್ನು ಹೊರಗಿಟ್ಟಿದ್ದರಿಂದ ಅದೇ ದಿವಸ ಬೆಳಿಗ್ಗೆ 9.00 ಗಂಟೆಗೆ ಈ ಬಗ್ಗೆ ಕೇಳಲು ಬಂದ ಪಿರ್ಯಾದಿ ಹಾಗೂ ಸಾಕ್ಷಿದಾರ ನಂ-4, 5 ನೇದವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ. ಕಲಂ 504 ಸಹಕಲಂ 149 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಕೊನೆಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಫಿರ್ಯಾದಿ ಹಾಗೂ ಸಾಕ್ಷಿದಾರ ನಂ-4, 5 ನೇದವರಿಗೆ ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ. ಕಲಂ 506 ಸಹಕಲಂ 149 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

30/8/19

ಸ್ಥಳಃ ಬನಹಟ್ಟಿ

ದಿನಾಂಕಃ 30.08.2019

ಪ್ರ. ದ. ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ.